ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಸಿ.ಜೆ.ಎಂ., ನ್ಯಾಯಾಲಯ, ಉಡುಪಿ.

OS no. 71/2023
DW -2

| | | |
|---|---|---|
| ಸಾಕ್ಷಿದಾರರ ಹೆಸರು | : | ಮನೋಹರ್ ಎಸ್ ಕಲ್ಮಾಡಿ |
| ತಂದೆಯ ಹೆಸರು | : | ಶ್ರೀಧರ್ ಎಸ್ ಕಲ್ಮಾಡಿ |
| ವಯಸ್ಸು | : | 47 |
| ಉದ್ಯೋಗ | : | ವಕೀಲರು |
| ವಾಸಸ್ಥಳ | : | ಉಡುಪಿ |

ದಿನಾಂಕಃ 18-03-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ ಪ್ರತಿವಾದಿ ಪರ ಹೆಚ್ ಎಸ್ ಎಸ್ ವಕೀಲರಿಂದಃ

ನಾನು ವಕೀಲ ವೃತ್ತಿ ಮಾಡುತಿದ್ದೇನೆ . ನನ್ನ ತಂದೆ ಶ್ರೀಧರ ಕಲ್ಮಾಡಿಯವರು ವಕೀಲರು ಮತ್ತು ನೋಟರಿಯವರಾಗಿದ್ದರು . ನನ್ನ ತಂದೆಯ ಸಹಿಯನ್ನು ನೋಡಿದರೇ ಗುರುತಿಸುತ್ತೇನೆ . ನನ್ನ ತಂದೆ 04-01-2004 ರಂದು ಮೃತಪಟ್ಟಿರುತ್ತಾರೆ . ನನ್ನ ತಂದೆ ಬದುಕಿದ್ದಾಗ ಅವರ ಜೊತೆ ಸಹಾಯಕರಾಗಿ ನಾನು ಕೆಲಸ ಮಾಡುತಿದ್ದೆ . ನನ್ನ ತಂದೆ ನೋಟರಿಯಾಗಿದ್ದಾಗ ಜಿಪಿಎಗಳನ್ನು ಯಾವ ರೀತಿ ಅಟೆಸ್ಟೇಶನ್ ಮಾಡುತಿದ್ದರು ಎಂಬ ಬಗ್ಗೆ ನನಗೆ ಗೊತ್ತು . ಯಾರಾದರೂ ಜಿಪಿಎಗಳನ್ನು ಅಟೆಸ್ಟೇಶನ್ ಗೆ ತಂದರೇ ನೋಟರಿ ರಿಜಿಸ್ಟರ್ ಗೆ ಪಕ್ಷಗಾರರ ಸಹಿಗಳನ್ನು ಪಡೆಯುತಿದ್ದರು, ಯಾರಿಂದ ಯಾರಿಗೆ ಜಿಪಿಎ ಕೊಡಲಾಗಿದೆ ಎಂದು ನರೇಶನ್ ಬರೆಯುತಿದ್ದರು . ಸಾಕ್ಷಿಗೆ ನಿಡಿ 9 ನ್ನು ತೋರಿಸಲಾಗಿ ಸಾಕ್ಷಿ ಅದನ್ನು ನೋಡಿ ಅದರಲ್ಲಿ ಇದ್ದ ಅವರ ತಂದೆ ಶ್ರೀಧರ್ ಕಲ್ಮಾಡಿಯವರ ಸಹಿಗಳನ್ನು ನೋಡಿ ಗುರುತಿಸಿರುತ್ತಾರೆ. ಸದ್ರಿ ಸಹಿಗಳನ್ನು ನಿಡಿ-9(ಎ) ರಿಂದ ನಿಡಿ-9(ಸಿ) ಎಂದು ಗುರುತಿಸಲಾಯಿತು . ನನ್ನ ತಂದೆ ಅವರ ನೋಟರಿ ಸೀಲನ್ನು ಸಹ ಹಾಕುತಿದ್ದರು . ಅವರ ರಿಜಿಸ್ಟ್ರೇಶನ್ ನಂಬರ್ ಈಗ ನೆನಪಿಲ್ಲ ನೋಡಿ ಹೇಳುತ್ತೇನೆ . ನಿಡಿ 9 ರಲ್ಲಿ ಇರುವ ನೋಟರಿ

ಸೀಲು ಕೂಡ ನಮ್ಮ ತಂದೆಯವರಿಗೆ ಸೇರಿದ ಸೀಲು ಆಗಿರುತ್ತದೆ . ನನ್ನ ತಂದೆ ನೋಟರಿ ರಿಜಿಸ್ಟರ್ ನ್ನು ನಿರ್ವಹಿಸುವ ಕ್ರಮ ಇತ್ತು. 2000 ಗೆ ಸಂಬದಪಟ್ಟ ನೋಟರಿ ರಿಜಿಸ್ಟರ್ ನನ್ನ ಬಳಿ ಇರುತ್ತದೆ. ಅದನ್ನು ನ್ಯಾಯಲಯಕ್ಕೆ ತಂದಿರುತ್ತೇನೆ . ಸದ್ರಿ ರಿಜಿಸ್ಟರ್ ನ್ನು ನಿಡಿ 18 ಎಂದು ಗುರುತಿಸಲಾಯಿತು. ಸದ್ರಿ ರಿಜಿಸ್ಟರ್ ನಲ್ಲಿ ದಿ 25-09-2000 ರಂದು ಜಿಪಿಎಯನ್ನು ಅಟೇಸ್ಟೇಶನ್ ಮಾಡಿದ ಬಗ್ಗೆ ನಮೂದು ಇರುತ್ತದೆ . ಸಾಕ್ಷಿ ಸದರಿ ರಿಜಿಸ್ಟರ್ ನಲ್ಲಿ ಸಂಬಂದಪಟ್ಟ ಎಂಟ್ರಿ ಯನ್ನು ತೋರಿಸಿರುತ್ತಾರೆ . ಸದರಿ ಎಂಟ್ರಿ ಸೀರಿಯಲ್ ನಂಬರ್ 638 ದಿ 25-09-2000 ಎಂದು ಇರುತ್ತದೆ . ಸದ್ರಿ ಸಂಪೂರ್ಣ ಎಂಟ್ರಿಯನ್ನು ನಿಡಿ 18 ಎ ಎಂದು ಗುರುತಿಸಲಾಯಿತು . ಸದ್ರಿ ನಿಡಿ 18 ಎ ಪ್ರಕಾರ ಯಾರು ಯಾರಿಗೆ ಜಿಪಿಎ ಕೊಡಲಾಗಿದೆ ಎಂದು ಬರೆಯಲಾಗಿದೆ . ಯಾವ ಉದ್ದೇಶಕ್ಕಾಗಿ ಜಿಪಿಎ ಕೊಡಲಾಗಿದೆ ಎಂದು ಸದ್ರಿ ರಿಜಿಸ್ಟರ್ ನಲ್ಲಿ ನಮೂದಿಸಲಾಗಿದೆ . ಸದ್ರಿ ನಿಡಿ 18 ಎ ನಲ್ಲಿ ಜಿಪಿಎ ಕೊಟ್ಟವರ ಸಹಿ ಇರುತ್ತದೆ . ಆದರೇಅವರ ಹೆಸರು ಗೊತ್ತಿಲ್ಲ . ಸದ್ರಿ ಸಹಿಯನ್ನು ನಿಡಿ 18 ಬಿ ಎಂದು ಗುರುತಿಸಲಾಯಿತು . ಸದ್ರಿ ಸಹಿಯ ಕೆಳಗೆ ನನ್ನ ತಂದೆ ಕೂಡ ಸಹಿ ಮಾಡಿರುತ್ತಾರೆ . ಸದ್ರಿ ಸಹಿಯನ್ನು ಸಾಕ್ಷಿ ಗುರುತಿಸಿದ್ದು ಅದನ್ನು ನಿಡಿ18 ಸಿ ಎಂದು ಗುರುತಿಸಲಾಯಿತು . ನಿಡಿ 9 ಜಿಪಿಎಯನ್ನು ನನ್ನ ತಂದೆ ತಯಾರು ಮಾಡಿ ನೋಟರಿ ಅಟೆಸ್ಟ್ ಮಾಡಿರುತ್ತಾರೆ .

**ಪಾಟೀ ಸವಾಲಿಗೆ ಕಾಲವಕಾಶ ಕೋರಿದ್ದು , ನೀಡಲಾಯಿತು .**

(ತೆರದ ನ್ಯಾಯಾಲಯದಲ್ಲಿ ಸಾಕ್ಷಿಯ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ರೀತ್ಯಾ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ.ಸರಿ ಇದೆ ಎಂದು ಒಪ್ಪಿದರು.

ಪ್ರ.ಹಿ.ಸಿ.ನ್ಯಾ.ಮತ್ತು ಸಿ.ಜೆ.ಎಂ
ಉಡುಪಿ.